Akashvani: Bangalore
National Bulletin In Kannada
10.04.2026: 7.35AM
**ಆಕಾಶವಾಣಿ, ಬೆಂಗಳೂರು**

**ರಾಷ್ಟ್ರೀಯ ವಾರ್ತೆಗಳು**

10.04.2026: 7.35AM

********

**ಮುಖ್ಯಾಂಶಗಳು :**

1. ಮೂರು ರಾಜ್ಯಗಳ ವಿಧಾನಸಭಾ ಚುನಾವಣೆ ಬಹುತೇಕ ಶಾಂತಿಯುತ; ಅಸ್ಸಾಂ, ಪುದುಚೇರಿಯಲ್ಲಿ ದಾಖಲೆ ಪ್ರಮಾಣದಲ್ಲಿ ಮತದಾನ
2. ಮಾರಿಷಸ್ ಪ್ರಧಾನಿ ಅವರೊಂದಿಗೆ ವಿದೇಶಾಂಗ ಸಚಿವ ಡಾ. ಎಸ್. ಜೈಶಂಕರ್ ಮಾತುಕತೆ; ದ್ವಿಪಕ್ಷೀಯ ಪಾಲುದಾರಿಕೆ ಬಲವರ್ಧನೆಗೆ ಒತ್ತು
3. ಆರ್ಥೋಡಾಕ್ಸ್ ಈಸ್ಟರ್ ವಾರಾಂತ್ಯದ ಹಿನ್ನೆಲೆ; ಉಕ್ರೇನ್‌ನಲ್ಲಿ ೩೨ ಗಂಟೆಗಳ ಕಾಲ ಕದನ ವಿರಾಮ ಘೋಷಿಸಿದ ರಷ್ಯಾ
4. ಐಪಿಎಲ್ ಟಿ-೨೦ ಕ್ರಿಕೆಟ್; ಕೋಲ್ಕತ್ತಾ ನೈಟ್ ರೈಡರ್ಸ್ ವಿರುದ್ಧ ಲಖನೌ ಸೂಪರ್ ಜೈಂಟ್ಸ್ ತಂಡಕ್ಕೆ ೩ ವಿಕೆಟ್‌ಗಳ ಜಯ

**********

ಅಸ್ಸಾಂ, ಕೇರಳಂ ಮತ್ತು ಪುದುಚೇರಿ ವಿಧಾನಸಭಾ ಚುನಾವಣೆ ಹಾಗೂ ಕರ್ನಾಟಕದ ಬಾಗಲಕೋಟೆ ಮತ್ತು ದಾವಣಗೆರೆ ದಕ್ಷಿಣ ಕ್ಷೇತ್ರಗಳು ಸೇರಿದಂತೆ ಮೂರು ರಾಜ್ಯಗಳ ನಾಲ್ಕು ವಿಧಾನಸಭಾ ಕ್ಷೇತ್ರಗಳ ಉಪಚುನಾವಣೆಯ ಮತದಾನ ಪ್ರಕ್ರಿಯೆ ನಿನ್ನೆ ಬಹುತೇಕ ಶಾಂತಿಯುತವಾಗಿ ನಡೆಯಿತು. ಚುನಾವಣಾ ಆಯೋಗದ ಮಾಹಿತಿಯ ಪ್ರಕಾರ ಅಸ್ಸಾಂನಲ್ಲಿ ಶೇಕಡ ೮೫.೩೮, ಪುದುಚೇರಿಯಲ್ಲಿ ಶೇಕಡ ೮೯.೮೩ರಷ್ಟು ಮತದಾನ ದಾಖಲಾಗಿದ್ದು, ಈ ಅಂಕಿಅಂಶ ಎರಡೂ ರಾಜ್ಯಗಳ ವಿಧಾನಸಭಾ ಚುನಾವಣಾ ಇತಿಹಾಸದಲ್ಲಿ ಅತ್ಯಂತ ಹೆಚ್ಚಿನ ಪ್ರಮಾಣದ ಮತದಾನ ಎನಿಸಿಕೊಂಡಿದೆ. ಕೇರಳಂನಲ್ಲಿ ಶೇಕಡ ೭೮.೦೩ರಷ್ಟು ಮತದಾನವಾಗಿದೆ. ಕರ್ನಾಟಕದ ಎರಡು ವಿಧಾನಸಭಾ ಕ್ಷೇತ್ರಗಳಿಗೆ ನಡೆದ ಉಪಚುನಾವಣೆಯಲ್ಲಿ ದಾವಣಗೆರೆ ದಕ್ಷಿಣದಲ್ಲಿ ಶೇಕಡ ೬೮.೪೩ ಹಾಗೂ ಬಾಗಲಕೋಟೆಯಲ್ಲಿ ಶೇಕಡ ೬೮.೬೭ರಷ್ಟು ಮತದಾನವಾಗಿದೆ. ಮುಖ್ಯ ಚುನಾವಣಾ ಆಯುಕ್ತ ಜ್ಞಾನೇಶ್ ಕುಮಾರ್ ಮತ್ತು ಚುನಾವಣಾ ಆಯುಕ್ತರಾದ ಡಾ. ಸುಖ್‌ಬೀರ್ ಸಿಂಗ್ ಸಂಧು ಮತ್ತು ಡಾ. ವಿವೇಕ್ ಜೋಶಿ ಅವರು ಮತದಾನದ ಪ್ರಕ್ರಿಯೆಯನ್ನು ನೇರ ವೆಬ್‌ಕಾಸ್ಟಿಂಗ್ ಮೂಲಕ ಮೇಲ್ವಿಚಾರಣೆ ನಡೆಸಿದರು. ವಿಶೇಷವೆಂದರೆ ಈ ಎಲ್ಲಾ ಪ್ರದೇಶಗಳ ಎಲ್ಲಾ ಮತಗಟ್ಟೆಗಳಲ್ಲಿ ಮೊದಲ ಬಾರಿಗೆ ನೇರ ವೆಬ್‌ಕಾಸ್ಟಿಂಗ್ ಸೌಲಭ್ಯ ಒದಗಿಸಲಾಗಿತ್ತು. ಮತದಾನದ ಅನುಕೂಲಕ್ಕಾಗಿ ಇವಿಎಂ ಬ್ಯಾಲೆಟ್ ಪೇಪರ್‌ಗಳ ಮೇಲೆ ಅಭ್ಯರ್ಥಿಗಳ ಬಣ್ಣದ ಭಾವಚಿತ್ರಗಳನ್ನು ಮುದ್ರಿಸುವುದು, ಮರುವಿನ್ಯಾಸಗೊಳಿಸಿದ ಮತದಾರರ ಮಾಹಿತಿ ಚೀಟಿಗಳು ಮತ್ತು ಪ್ರತಿ ಮತಗಟ್ಟೆಗೆ ಗರಿಷ್ಠ ಒಂದು ಸಾವಿರದ ೨೦೦ ಮತದಾರರ ಮಿತಿಯನ್ನು ನಿಗದಿಪಡಿಸುವಂತಹ ಹಲವು ಜನಸ್ನೇಹಿ ಸೌಲಭ್ಯಗಳನ್ನು ಕೈಗೊಳ್ಳಲಾಗಿತ್ತು.

**********

ಮಾರಿಷಸ್ ಭೇಟಿಯಲ್ಲಿರುವ ಡಾ. ಎಸ್. ಜೈಶಂಕರ್ ಅವರು, ಮಾರಿಷಸ್ ಪ್ರಧಾನಿ ನವೀನ್ ರಾಮಗೂಲಂ ಅವರೊಂದಿಗೆ ದ್ವಿಪಕ್ಷೀಯ ಮಾತುಕತೆ ನಡೆಸಿದ್ದು, ಭಾರತ ಮತ್ತು ಮಾರಿಷಸ್ ನಡುವಿನ ಪಾಲುದಾರಿಕೆ ಗಣನೀಯ ಪ್ರಗತಿ ಕಂಡಿದ್ದು, ಶಿಕ್ಷಣ, ಆರೋಗ್ಯ, ಸಾಮರ್ಥ್ಯವೃದ್ಧಿ, ಕಡಲ ಸಹಕಾರ ಸೇರಿದಂತೆ ಮುಂತಾದ ವಿಷಯಗಳ ಕುರಿತು ಚರ್ಚಿಸಲಾಗಿದೆ ಎಂದು

ತಿಳಿಸಿದ್ದಾರೆ. ಮಾರಿಷಸ್‌ಗೆ ಭಾರತ ನಿರಂತರ ಸಹಕಾರ ನೀಡಲಿದೆ. ಕಳೆದ ವರ್ಷ ಮಾರ್ಚ್‌ನಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರು, ಮಾರಿಷಸ್‌ಗೆ ಭೇಟಿ ನೀಡಿದ್ದನ್ನು ಪ್ರಸ್ತಾಪಿಸಿದ ಸಚಿವ ಜೈಶಂಕರ್ ಅವರು, ಭಾರತ ಮತ್ತು ಮಾರಿಷಸ್ ನಡುವೆ ಐತಿಹಾಸಿಕ ಬಾಂಧವ್ಯ, ಪರಸ್ಪರ ವಿಶ್ವಾಸ, ನೆರೆಹೊರೆ ಮೊದಲು ಎಂಬ ಭಾರತದ ನೀತಿಯಂತೆ ಮಿಷನ್ ಮಹಾಸಾಗರ್ ಅಡಿ ಮಾರಿಷಸ್‌ನೊಂದಿಗೆ ಶುದ್ಧ ಇಂಧನ, ಆರೋಗ್ಯ ಕ್ಷೇತ್ರದಲ್ಲಿ ಸಹಕಾರ ಮತ್ತು ಪರಿಸರಸ್ನೇಹಿ ಉಪಕ್ರಮಗಳನ್ನು ಮುಂದುವರಿಸಲಾಗುವುದು ಎಂದು ಸುದ್ದಿಗೋಷ್ಠಿಯಲ್ಲಿ ತಿಳಿಸಿದ್ದಾರೆ. ವಿದೇಶಾಂಗ ಸಚಿವರು ೯ನೇ ಹಿಂದೂ ಮಹಾಸಾಗರ ಸಮ್ಮೇಳನದಲ್ಲಿ ಭಾಗವಹಿಸಲು ಮಾರಿಷಸ್‌ಗೆ ಭೇಟಿ ನೀಡಿದ್ದಾರೆ.

**********

ಮೂರು ದಿನಗಳ ಅಧಿಕೃತ ಪ್ರವಾಸಕ್ಕಾಗಿ ಅಮೆರಿಕಾಗೆ ಭೇಟಿ ನೀಡಿರುವ ವಿದೇಶಾಂಗ ಕಾರ್ಯದರ್ಶಿ ವಿಕ್ರಂ ಮಿಸ್ರಿ ವಾಷಿಂಗ್ಟನ್ ಡಿಸಿಯ ಪ್ರಮುಖ ಕಾರ್ಯತಂತ್ರದ ಸಮುದಾಯದ ಚಿಂತಕರೊಂದಿಗೆ ಭಾರತ - ಅಮೆರಿಕ ನಡುವಿನ ದ್ವಿಪಕ್ಷೀಯ ಸಂಬಂಧಗಳ ಪ್ರಸ್ತುತ ಸ್ಥಿತಿಗತಿ ಮತ್ತು ಭವಿಷ್ಯದ ಹಾದಿಯ ಬಗ್ಗೆ ಚರ್ಚೆ ನಡೆಸಿದರು. ಪ್ರಸ್ತುತ ಜಾಗತಿಕ ರಾಜಕೀಯ ವಿದ್ಯಮಾನಗಳು ಮತ್ತು ಅವು ಜಾಗತಿಕ ಇಂಧನ, ಆಹಾರ ಮತ್ತು ಆರ್ಥಿಕ ಭದ್ರತೆಯ ಮೇಲೆ ಬೀರುತ್ತಿರುವ ಪರಿಣಾಮಗಳ ಕುರಿತು ಈ ಸಂವಾದದಲ್ಲಿ ಸುದೀರ್ಘವಾಗಿ ಸಮಾಲೋಚಿಸಲಾಯಿತು.

**********

ಕೇಂದ್ರ ಇಂಧನ ಸಚಿವ ಮನೋಹರ್ ಲಾಲ್ ಭೂತಾನ್ ದೊರೆ ಜಿಗ್ಮೆ ಕೇಸರ್ ನಾಮ್ಗೆಲ್ ವಾಂಗ್ಚುಕ್ ಅವರನ್ನು ಭೇಟಿ ಮಾಡಿ ಮಾತುಕತೆ ನಡೆಸಿದರು. ನಾಲ್ಕು ದಿನಗಳ ಅಧಿಕೃತ ಪ್ರವಾಸದ ಭಾಗವಾಗಿ ನಿನ್ನೆ ನಡೆದ ಈ ಭೇಟಿಯ ಸಂದರ್ಭದಲ್ಲಿ ಸಚಿವರು, ಭಾರತ-ಭೂತಾನ್ ನಡುವಿನ ವಿಶಿಷ್ಟ ಸ್ನೇಹ ಸಂಬಂಧ ಮತ್ತು ಪಾಲುದಾರಿಕೆಯನ್ನು ಮತ್ತಷ್ಟು ಬಲಪಡಿಸುವಲ್ಲಿ ಭೂತಾನ್ ದೊರೆ ನೀಡುತ್ತಿರುವ ನಿರಂತರ ಮಾರ್ಗದರ್ಶನ ಮತ್ತು ನಾಯಕತ್ವದ ಕುರಿತು ಮೆಚ್ಚುಗೆ ವ್ಯಕ್ತಪಡಿಸಿದರು. ಈ ಭೇಟಿ ಉಭಯ ದೇಶಗಳ ನಡುವಿನ ರಾಜತಾಂತ್ರಿಕ ಮತ್ತು ಸಹಕಾರ ಸಂಬಂಧಗಳನ್ನು ವೃದ್ಧಿಸುವ ನಿಟ್ಟಿನಲ್ಲಿ ಮಹತ್ವದ ಮೈಲಿಗಲ್ಲಾಗಿದೆ.

**********

ಜಲ ಶಕ್ತಿ ಸಚಿವಾಲಯದ ೨೧ನೇ ಕೇಂದ್ರ ಮೇಲ್ವಿಚಾರಣಾ ಸಮಿತಿ ಸಭೆಯ ಭಾಗ-೨ ನಿನ್ನೆ ನಡೆದಿದ್ದು, ಈ ವೇಳೆ ನದಿಗಳ ಪುನರುಜ್ಜೀವನ ಮತ್ತು ಮಾಲಿನ್ಯ ಕಡಿತದ ಕುರಿತು ರಾಜ್ಯಗಳ ಪ್ರಗತಿಯನ್ನು ಪರಿಶೀಲಿಸಲಾಯಿತು. ಕಲುಷಿತ ನದಿ ಪ್ರದೇಶಗಳಿಗೆ ಕ್ರಿಯಾ ಯೋಜನೆಗಳ ಅನುಷ್ಠಾನದ ಸ್ಥಿತಿ, ಪರಿಶೀಲಿಸಿದ ಸಮಿತಿ, ಒಳಚರಂಡಿ ಸಂಸ್ಕರಣಾ ಘಟಕಗಳು ಮತ್ತು ಸಾಮಾನ್ಯ ತ್ಯಾಜ್ಯ ಸಂಸ್ಕರಣಾ ಘಟಕಗಳ ಪ್ರಗತಿಯನ್ನೂ ಸಹ ಪರಾಮರ್ಶಿಸಿತು. ಅಸ್ತಿತ್ವದಲ್ಲಿರುವ ಒಳಚರಂಡಿ ಸಂಸ್ಕರಣಾ ಮೂಲಸೌಕರ್ಯಗಳ ಕಾರ್ಯನಿರ್ವಹಣೆ ಮತ್ತು ಅನುಸರಣೆ ಸ್ಥಿತಿ, ಘನತ್ಯಾಜ್ಯ ನಿರ್ವಹಣಾ ಮಧ್ಯಸ್ಥಿಕೆಗಳು, ಪರಿಸರ ಮತ್ತು ಪ್ರವಾಹ ಪ್ರದೇಶ ನಿಯಂತ್ರಣಕ್ಕೆ ಸಂಬಂಧಿಸಿದ ಸಮಸ್ಯೆಗಳನ್ನೂ ಸಚಿವಾಲಯ ಪರಿಶೀಲಿಸಿತು. ಕರಾವಳಿ ಪ್ರದೇಶಗಳಲ್ಲಿ ಮಾಲಿನ್ಯ ನಿರ್ವಹಣೆಗಾಗಿ ಕ್ರಿಯಾ ಯೋಜನೆಗಳ ಸಲ್ಲಿಕೆಯ ಸ್ಥಿತಿ ಹಾಗೂ ನದಿ ಪುನರುಜ್ಜೀವನ ಸಮಿತಿಗಳ ಕಾರ್ಯನಿರ್ವಹಣೆಯನ್ನು ಸಹ ಸಮಿತಿ ಪರಿಶೀಲಿಸಿತು.

**********

ಆರ್ಥೋಡಾಕ್ಸ್ ಈಸ್ಟರ್ ವಾರಾಂತ್ಯದ ಹಿನ್ನೆಲೆಯಲ್ಲಿ ಉಕ್ರೇನ್‌ನಲ್ಲಿ ೩೨ ಗಂಟೆಗಳ ಕಾಲ ಕದನ ವಿರಾಮವನ್ನು ಘೋಷಿಸಿರುವುದಾಗಿ ರಷ್ಯಾ ಅಧ್ಯಕ್ಷ ವ್ಲಾಡಿಮಿರ್ ಪುಟಿನ್ ತಿಳಿಸಿದ್ದಾರೆ. ಈ ಹಬ್ಬದ ಪ್ರಯುಕ್ತ ಕೆಲವು ಸಂಘರ್ಷದ ಚಟುವಟಿಕೆಗಳಿಗೆ ವಿರಾಮ ನೀಡುವಂತೆ ಉಕ್ರೇನ ಅಧ್ಯಕ್ಷ ವೊಲೊಡಿಮಿರ್ ಝೆಲೆನ್ಸ್ಕಿ ಈ ಹಿಂದೆ ಪ್ರಸ್ತಾಪಿಸಿದ್ದರು. ಈ ಕುರಿತು

ಅಧ್ಯಕ್ಷ ಪುಟಿನ್ ಅವರ ಆದೇಶ ಬಿಡುಗಡೆ ಮಾಡಿರುವ ರಷ್ಯಾ, ತಮ್ಮ ಪಡೆಗಳು ಶನಿವಾರದಿಂದ ಆರಂಭಗೊಂಡು ಭಾನುವಾರದ ಅಂತ್ಯದವರೆಗೆ ಕದನವಿರಾಮವನ್ನು ಪಾಲಿಸಲಿವೆ ಎಂದು ತಿಳಿಸಿದೆ.

**********

ಲೆಬೆನಾನ್ ದೇಶದೊಂದಿಗೆ ಸಾಧ್ಯವಾದಷ್ಟು ಶೀಘ್ರದಲ್ಲಿ ನೇರ ಮಾತುಕತೆಗಳನ್ನು ಆರಂಭಿಸುವಂತೆ ತಮ್ಮ ಸಚಿವ ಸಂಪುಟಕ್ಕೆ ಸೂಚಿಸಿರುವುದಾಗಿ ಇಸ್ರೇಲ್ ಪ್ರಧಾನಿ ಬೆಂಜಮಿನ್ ನೆತನ್ಯಾಹು ತಿಳಿಸಿದ್ದಾರೆ. ಆದರೆ ಲೆಬೆನಾನ್‌ನಲ್ಲಿ ಸದ್ಯಕ್ಕೆ ಯಾವುದೇ ಕದನವಿರಾಮವಿಲ್ಲ ಎಂದು ಸ್ಪಷ್ಟಪಡಿಸಿದ್ದಾರೆ. ಇಸ್ರೇಲ್‌ನ ಉತ್ತರ ಭಾಗದಲ್ಲಿ ಭದ್ರತೆ ಮರುಸ್ಥಾಪನೆಯಾಗುವವರೆಗೂ ಹಿಜ್ಬುಲ್ಲಾ ಸಂಘಟನೆಯ ಮೇಲೆ ದಾಳಿ ಮುಂದುವರಿಸಲಾಗುವುದು ಎಂದು ವಿಡಿಯೋ ಹೇಳಿಕೆಯಲ್ಲಿ ತಿಳಿಸಿದ್ದಾರೆ. ಇದಕ್ಕೂ ಮುನ್ನ ಇಸ್ರೇಲ್ ಸೇನೆ ಬೈರೂತ್‌ನ ಕೆಲವು ಭಾಗಗಳ ಜನರಿಗೆ ಸ್ಥಳಾಂತರಗೊಳ್ಳುವಂತೆ ಆದೇಶಿಸಿತ್ತು. ಈ ನಡುವೆ ನಿನ್ನೆ ನಡೆದ ಇಸ್ರೇಲ್ ದಾಳಿಯಲ್ಲಿ ಮೃತರ ಸಂಖ್ಯೆ ೩೦೩ಕ್ಕೆ ಏರಿಕೆಯಾಗಿದೆ ಎಂದು ಲೆಬೆನಾನ್ ಆರೋಗ್ಯ ಸಚಿವಾಲಯ ಮಾಹಿತಿ ನೀಡಿದೆ.

**********

ಕೋಲ್ಕತ್ತಾದ ಈಡನ್ ಗಾರ್ಡನ್‌ನಲ್ಲಿ ಕಳೆದ ರಾತ್ರಿ ನಡೆದ ಐಪಿಎಲ್ ಟಿ-೨೦ ಕ್ರಿಕೆಟ್ ಟೂರ್ನಿಯ ಪಂದ್ಯದಲ್ಲಿ ಲಖನೌ ಸೂಪರ್ ಜೈಂಟ್ಸ್ ತಂಡ ಕೋಲ್ಕತ್ತಾ ನೈಟ್ ರೈಡರ್ಸ್ ತಂಡವನ್ನು ೩ ವಿಕೆಟ್‌ಗಳಿಂದ ಮಣಿಸಿದೆ. ಕೋಲ್ಕತ್ತಾ ನೀಡಿದ್ದ ೧೮೨ ರನ್‌ಗಳ ಗುರಿಯನ್ನು ಬೆನ್ನತ್ತಿದ ಲಖನೌ, ಕೊನೆಯ ಎಸೆತದ ವೇಳೆಗೆ ೭ ವಿಕೆಟ್ ನಷ್ಟಕ್ಕೆ ಗುರಿ ಸಾಧಿಸಿ ಗೆಲುವು ತನ್ನದಾಗಿಸಿಕೊಂಡಿತು. ಇಂದು ಗುವಾಹತಿಯಲ್ಲಿ ನಡೆಯಲಿರುವ ಪಂದ್ಯದಲ್ಲಿ ರಾಯಲ್ ಚಾಲೆಂಜರ್ಸ್ ಬೆಂಗಳೂರು ಹಾಗೂ ರಾಜಸ್ತಾನ್ ರಾಯಲ್ಸ್ ತಂಡಗಳು ಮುಖಾಮುಖಿಯಾಗಲಿವೆ. ಪಂದ್ಯ ರಾತ್ರಿ ೭.೩೦ಕ್ಕೆ ಆರಂಭವಾಗಲಿದೆ.

**********

ವಿಶ್ವ ಹೋಮಿಯೋಪತಿ ದಿನವನ್ನು ಇಂದು ಆಚರಿಸಲಾಗುತ್ತಿದೆ. ಹೋಮಿಯೋಪತಿ ವೈದ್ಯಕೀಯ ಪದ್ಧತಿಯ ಸ್ಥಾಪಕರಾದ ಡಾ. ಸ್ಯಾಮ್ಯುಯೆಲ್ ಹಾನಿಮನ್ ಅವರ ಜನ್ಮದಿನದ ಸ್ಮರಣಾರ್ಥವಾಗಿ ಈ ದಿನವನ್ನು ಆಚರಿಸಲಾಗುತ್ತದೆ. ಈ ವರ್ಷದ ವಿಶ್ವ ಹೋಮಿಯೋಪತಿ ದಿನದ ಘೋಷವಾಕ್ಯ "ಸುಸ್ಥಿರ ಆರೋಗ್ಯಕ್ಕಾಗಿ ಹೋಮಿಯೋಪತಿ" ಎಂಬುದಾಗಿದೆ. ವಿಶ್ವದಲ್ಲೇ ಅತಿ ಹೆಚ್ಚು ಹೋಮಿಯೋಪತಿ ವೈದ್ಯಕೀಯ ಕಾರ್ಯಪಡೆಯನ್ನು ಹೊಂದಿರುವ ದೇಶಗಳಲ್ಲಿ ಭಾರತವೂ ಒಂದಾಗಿದ್ದು, ಸುಮಾರು ೨.೫ ಲಕ್ಷಕ್ಕೂ ಅಧಿಕ ನೋಂದಾಯಿತ ಹೋಮಿಯೋಪತಿ ವೈದ್ಯರು ಇಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ. ಈ ದಿನದ ಅಂಗವಾಗಿ ಕೇಂದ್ರ ಆಯುಷ್ ಸಚಿವಾಲಯವು ನವದೆಹಲಿಯಲ್ಲಿ ಎರಡು ದಿನಗಳ ಸಂವಾದಾತ್ಮಕ ವೇದಿಕೆಯನ್ನು ಆಯೋಜಿಸಿದೆ. ಈ ಕಾರ್ಯಕ್ರಮದಲ್ಲಿ ಪ್ರಮುಖ ನೀತಿ ನಿರೂಪಕರು, ಸಂಶೋಧಕರು ಮತ್ತು ವೈದ್ಯಕೀಯ ಪ್ರತಿನಿಧಿಗಳು ಭಾಗವಹಿಸಲಿದ್ದು, ಸುಸ್ಥಿರ ಆರೋಗ್ಯ ವ್ಯವಸ್ಥೆಯನ್ನು ನಿರ್ಮಿಸುವಲ್ಲಿ ಹೋಮಿಯೋಪತಿಯ ವಿಕಸನಗೊಳ್ಳುತ್ತಿರುವ ಪಾತ್ರದ ಬಗ್ಗೆ ಚರ್ಚಿಸಲಿದ್ದಾರೆ. ಈ ಕಾರ್ಯಕ್ರಮವು ಹೋಮಿಯೋಪತಿ ಕ್ಷೇತ್ರದಲ್ಲಿನ ಪ್ರಮುಖ ಸಂಶೋಧನಾ ಪ್ರಗತಿಗಳು, ಸಾರ್ವಜನಿಕ ಆರೋಗ್ಯ ಉಪಕ್ರಮಗಳು ಮತ್ತು ನೀತಿ ನಿರೂಪಣೆಗಳನ್ನು ಪ್ರದರ್ಶಿಸಲಿದೆ ಎಂದು ಆಯುಷ್ ಸಚಿವಾಲಯ ತಿಳಿಸಿದೆ.

**********

ಇರಾನ್‌ನ ರಾಜಧಾನಿ ತೆಹರಾನ್‌ನಲ್ಲಿ ಈ ವಾರದ ಆರಂಭದಲ್ಲಿ ನಡೆದ ಭೀಕರ ದಾಳಿಯಲ್ಲಿ ತೀವ್ರವಾಗಿ ಗಾಯಗೊಂಡಿದ್ದ ಹಿರಿಯ ನಾಯಕ ಕಮಾಲ್ ಖರ್ರಾಜಿ ಚಿಕಿತ್ಸೆ ಫಲಕಾರಿಯಾಗದೆ ನಿಧನರಾಗಿದ್ದಾರೆ. ಅವರ ನಿವಾಸವನ್ನೇ ಗುರಿಯಾಗಿಸಿಕೊಂಡು ನಡೆಸಲಾಗಿದ್ದ ಈ ದಾಳಿಯಲ್ಲಿ ಖರ್ರಾಜಿ ಅವರ ಪತ್ನಿ ಕೂಡ ಪ್ರಾಣ ಕಳೆದುಕೊಂಡಿದ್ದರು.

**********

ಕೇಂದ್ರ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವೆ ಅನ್ನಪೂರ್ಣದೇವಿ ನವದೆಹಲಿಯಲ್ಲಿ ನಿನ್ನೆ ಪೋಷಣ್ ಪಾಕ್ಷಿಕ ೨೦೨೬ರ ಲನೇ ಆವೃತ್ತಿಗೆ ಚಾಲನೆ ನೀಡಿದರು. 'ಜೀವನದ ಮೊದಲ ಆರು ವರ್ಷಗಳಲ್ಲಿ ಮೆದುಳಿನ ಬೆಳವಣಿಗೆಯನ್ನು ಗರಿಷ್ಠಗೊಳಿಸುವುದು' ಎಂಬುದು ಪೋಷಣ್ ಪಾಕ್ಷಿಕ ಕಾರ್ಯಕ್ರಮದ ವಿಷಯವಾಗಿದೆ. ಸಭೆಯನ್ನುದ್ದೇಶಿಸಿ ಮಾತನಾಡಿದ ಸಚಿವರು, ಈ ಪಾಕ್ಷಿಕವು ಪೌಷ್ಠಿಕಾಂಶವನ್ನು ಜನರ ಚಳವಳಿಯನ್ನಾಗಿ ಪರಿವರ್ತಿಸುವ ಪ್ರಯತ್ನವಾಗಿದೆ. ಅಂಗನವಾಡಿ ಮತ್ತು ಆಶಾ ಕಾರ್ಯಕರ್ತೆರು ಈ ಆಂದೋಲನದ ಬೆನ್ನಲುಬಾಗಿದ್ದು, ಇವರು ಅವಿಶ್ರಾಂತವಾಗಿ ಕೆಲಸ ಮಾಡುತ್ತಿದ್ದಾರೆ ಎಂದು ಹೇಳಿದರು. ನೈರ್ಮಲ್ಯ ಕುರಿತು ಕಲಿಸುವುದರಿಂದ ಹಿಡಿದು ಪೌಷ್ಠಿಕಾಂಶ ಪದ್ಧತಿಗಳ ಬಗ್ಗೆ ಅಂಗನವಾಡಿ ಕಾರ್ಯಕರ್ತೆರು ಪ್ರತಿ ದಿನ ದೇಶದ ಮಕ್ಕಳ ಭವಿಷ್ಯವನ್ನು ರೂಪಿಸುತ್ತಿದ್ದಾರೆ ಎಂದರು. ಉತ್ತಮ ಮಕ್ಕಳ ಪೋಷಣೆಯನ್ನು ಖಚಿತಪಡಿಸಿಕೊಳ್ಳಲು ಸಾಂಪ್ರದಾಯಿಕ ಆಹಾರ ಮತ್ತು ಸ್ಥಳೀಯ ಪಾಕ ವಿಧಾನಗಳನ್ನು ಉತ್ತೇಜಿಸಬೇಕು. ಸಮಗ್ರ ಅಭಿವೃದ್ಧಿಗಾಗಿ ಸಾಂಪ್ರದಾಯಿಕ ಆಟಗಳನ್ನು ಪ್ರೋತ್ಸಾಹಿಸಬೇಕು ಎಂದು ಸಚಿವೆ ಅನ್ನಪೂರ್ಣದೇವಿ ಸಲಹೆ ನೀಡಿದರು.

*****END*****